## ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ:** ವಿಶೇಷ ಚೇತನ (ಅಂಗವಿಕಲ) ಸಿಬ್ಬಂದಿಗಳಿಗೆ ಮಿದು (ಫ್ಲೆಕ್ಸಿ) ಸಮಯ ಸೌಲಭ್ಯದ ಬಗ್ಗೆ.

****

**ಪ್ರಸ್ತಾವನೆ:**

6ನೇ ರಾಜ್ಯ ವೇತನ ಆಯೋಗವು ಎಲ್ಲಾ ವಿಧದ ಹುದ್ದೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ವಿಶೇಷ ಚೇತನ (ಅಂಗವಿಕಲ) ಸಿಬ್ಬಂದಿಗಳು ಕಚೇರಿಗೆ ಬಂದು ಹೋಗಲು ಎದುರಿಸುತ್ತಿರುವ ತೊಂದರೆಗಳನ್ನು ಗಮನದಲ್ಲಿರಿಸಿ, ಆಯೋಗವು ವಿಶೇಷ ಚೇತನ (ಅಂಗವಿಕಲ) ಸಿಬ್ಬಂದಿಗಳಿಗೆ ಅವರುಗಳು ಭೋಜನದ ಸಮಯದಲ್ಲಿ ಮತ್ತು ಕಚೇರಿಯ ವೇಳೆಯ ನಂತರವೂ ಕರ್ತವ್ಯ ನಿರ್ವಹಿಸುವ ಷರತ್ತಿಗೊಳಪಟ್ಟು, ವಿಶೇಷ ಚೇತನ ಸಿಬ್ಬಂದಿಗಳು ನಿಗದಿತ ಕಚೇರಿ ವೇಳೆಗಿಂತ ಒಂದು ಗಂಟೆ ತಡವಾಗಿ ಕೆಲಸಕ್ಕೆ ಹಾಜರಾಗಲು ಅನುಮತಿಸುವಂತೆ ಆಯೋಗವು ಸರ್ಕಾರಕ್ಕೆ ಶಿಫಾರಸ್ಸು ಮಾಡಿರುತ್ತದೆ. 6ನೇ ವೇತನ ಆಯೋಗದ ಮೇಲ್ಕಂಡ ಶಿಫಾರಸ್ಸನ್ನು ಸಚಿವ ಸಂಪುಟ ಸಭೆಯಲ್ಲಿ ಪರಿಶೀಲಿಸಿ, ನಿರ್ಣಯ ಕೈಗೊಂಡಿದ್ದು, ವಿಶೇಷ ಚೇತನ (ಅಂಗವಿಕಲ) ಸಿಬ್ಬಂದಿಗಳಿಗೆ ಮಿದು (ಫ್ಲೆಕ್ಸಿ) ಸಮಯವನ್ನು ಜಾರಿಗೊಳಿಸಲು ನಿರ್ಧರಿಸಲಾಗಿರುತ್ತದೆ. ಅದರಂತೆ ಈ ಕೆಳಕಂಡ ಆದೇಶ.

**ಸರ್ಕಾರದ ಆದೇಶದ ಸಂಖ್ಯೆ: ಸಿಆಸುಇ 04 ಕತವ 2019**
**ಬೆಂಗಳೂರು, ದಿನಾಂಕ: 08.02.2019**

ರಾಜ್ಯದ ಎಲ್ಲಾ ಸರ್ಕಾರಿ ಕಚೇರಿಗಳಲ್ಲಿ ವಿವಿಧ ವೃಂದ ಮತ್ತು ಹುದ್ದೆಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ವಿಶೇಷ ಚೇತನ (ಅಂಗವಿಕಲ)ಸಿಬ್ಬಂದಿಗಳಿಗೆ ದಿನಾಂಕ:01.02.2019 ರಿಂದ ಜಾರಿಗೆ ಬರುವಂತೆ ಅವರುಗಳು ಭೋಜನ ಸಮಯದಲ್ಲಿ ಮತ್ತು ಕಚೇರಿಯ ವೇಳೆಯ ನಂತರವೂ ಕತ್ಯರ್ವ ನಿರ್ವಹಿಸುವ ಷರತ್ತಿಗೊಳಪಟ್ಟು ನಿಗದಿತ ಕಚೇರಿ ವೇಳೆಗಿಂತ ಒಂದು ಗಂಟೆ ತಡವಾಗಿ ಕರ್ತವ್ಯಕ್ಕೆ ಹಾಜರಾಗಲು ಮಿದು ಸಮಯವನ್ನು (ಫ್ಲೆಕ್ಸಿ) ಜಾರಿಗೆ ತರಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

8/2/19

(ಕೆ.ರವೀಂದ್ರ)
**ಸರ್ಕಾರದ ಅಧೀನ ಕಾರ್ಯದರ್ಶಿ**
**ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ**
**(ಆಡಳಿತ ಸುಧಾರಣೆ-ತಪಾಸಣೆ)**
8/2/19

**ಗೆ,**

1. ಸರ್ಕಾರದ ಎಲ್ಲಾ ಅಪರ ಮುಖ್ಯ/ಪ್ರಧಾನ/ಕಾರ್ಯದರ್ಶಿಗಳು
2. ಸರ್ಕಾರದ ಎಲ್ಲಾ ವಿಶೇಷ/ಅಪರ/ಜಂಟಿ/ಉಪ/ಅಧೀನ ಕಾರ್ಯದರ್ಶಿಗಳು ಮತ್ತು ಶಾಖಾಧಿಕಾರಿಗಳು
3. ರಾಜ್ಯದ ಎಲ್ಲಾ ಇಲಾಖೆಗಳ ಮುಖ್ಯಸ್ಥರುಗಳು ಹಾಗೂ ಸಮನ್ವಯಾಧಿಕಾರಿಗಳು ಮತ್ತು ಸಮಾನಾಂತರ ಹುದ್ದೆಯ ಅಧಿಕಾರಿಗಳು

4. ಸರ್ಕಾರದ ಮುಖ್ಯ ಕಾರ್ಯದರ್ಶಿಗಳ/ಅಪರ ಮುಖ್ಯ ಕಾರ್ಯದರ್ಶಿಗಳ ಆಪ್ತ ಕಾರ್ಯದರ್ಶಿಗಳು
5. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ ಮತ್ತು ಅಭಿವೃದ್ಧಿ ಆಯುಕ್ತರ ಆಪ್ತ ಕಾರ್ಯದರ್ಶಿಗಳು
6. ಸರ್ಕಾರದ ಉಪ ಕಾರ್ಯದರ್ಶಿ(ಸಚಿವ ಸಂಪುಟ)ವಿಧಾನಸೌಧ ಬೆಂಗಳೂರು.(ಉಲ್ಲೇಖ ಪ್ರಕರಣ ಸಂಖ್ಯೆ:ಸಿ703/2018)
7. ಸರ್ಕಾರದ ಅಧೀನ ಕಾರ್ಯದರ್ಶಿ,ಸಿಆಸುಇ(ಸಿಬ್ಬಂದಿ)–ವಾರ್ಷಿಕ ಸಂಗ್ರಹದಲ್ಲಿಡಲು ಪ್ರತಿಗಳೊಂದಿಗೆ
8. ಸರ್ಕಾರದ ಅಧೀನ ಕಾರ್ಯದರ್ಶಿ,ಆರ್ಥಿಕ ಇಲಾಖೆ(ಸೇವೆಗಳು–2)(ಉಲ್ಲೇಖ) ಅನಧಿಕೃತ ಟಿಪ್ಪಣಿ ಸಂಖ್ಯೆ:ಆಇ 24 ಎಸ್‌ಆರ್‌ಪಿ 2018, ದಿನಾಂಕ:27.12.2018.
9. ವಾರದ ಗೆಜೆಟ್/ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿಗಳು